## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

### ಸಿಸಿ ನಂ.805/2017

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸರು, ಸೇಡಂ.

-:: ವಿರುದ್ಧ ::-

ಆರೋಪಿಃ ನಾಗರಾಜ ತಂದೆ ಶಿವಶರಣಪ್ಪ,
ವಃ 38 ವರ್ಷ, ಉಃ ಕೂಲಿ ಕೆಲಸ,
ಸಾಃ ಶಾ ಹುಸೇನಿ ಚಿಲ್ಲಾ, ಬ್ರಹ್ಮಪುರ, ಕಲಬುರಗಿ.

----

### ದೋ ಷಾ ರೋ ಪ ಣೆ

ನಾನು ಶ್ರೀ ಮಹಾದೇವ ಕಾನಟ್ಟಿ, ಬಿಕಾಂ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತನಾದ ನೀನು ದಿನಾಂಕ 27-05-2015 ರಂದು ಬೆಳಿಗ್ಗೆ 11-00 ಗಂಟೆ ಸುಮಾರಿಗೆ ಸೇಡಂ ಅಬಕಾರಿ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಸೇಡಂ ಪಟ್ಟಣದ ಕೆಇಬಿ ಕಾಲೋನಿ ರಸ್ತೆಯಲ್ಲಿ ನೀನು ಯಾವುದೇ ಪರವಾನಿಗೆ ಇಲ್ಲದೇ ಮೋಟಾರ್ ಸೈಕಲ್ ನಂ.ಕೆಎ-32/ಯು-7647 ನೇದ್ದರ ಮೇಲೆ 650 ಎಂ.ಎಲ್.ನ 24 ಕಿಂಗ್ ಫಿಷರ್ ಬಾಟಲ್‌ಗಳನ್ನು ಸರಬರಾಜು ಮಾಡುತ್ತಿದ್ದಾಗ, ಚಾಸಾ-1, 3, 5 ಮತ್ತು 6 ರವರು ಕೂಡಿ, ಚಾಸಾ-1 ಮತ್ತು 2 ನೇದ್ದವರ ಸಮಕ್ಷಮದಲ್ಲಿ ನಿನ್ನ ಮೇಲೆ ದಾಳಿ ಮಾಡಿದಾಗ ನೀನು ನಿನ್ನ ಮೋಟಾರ್ ಸೈಕಲನ್ನು ಸ್ಥಳದಲ್ಲೇ ಬಿಟ್ಟು ಓಡಿ ಹೋಗಿದ್ದು, ಕಾರಣ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

13/12/19

ಪ್ರ.ದ.ನ್ಯಾ.ದಂ. ಸೇಡಂ.

ದಿನಾಂಕಃ 13-12-2019